ಓ ಎಸ್ ನಂ.141/2024

ಪಿ.ಡಬ್ಲು-1

ವೈಶಾಲಿ ಗಂಡಃ ರಾಚಯ್ಯ ಸ್ವಾಮಿ @ ಮಠಪತಿ

**ಇಂದು ದಿನಾಂಕಃ10-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು 2ನೇ ಪ್ರತಿವಾದಿ ಪರ ಶ್ರೀ ಸಿ ಎಸ್.ಎಚ್ ವಕೀಲರಿಂದ.**

ನಾವು ಮೊದಲು ಅಸಲು ದಾವೆ ಸಂಖ್ಯೆ 110/2015 ಎಂಬ ದಾವೆಯನ್ನು ಹಾಕಿದ್ದೇವು ಎಂದರೆ ಸರಿ. ಸದರಿ ದಾವೆಯನ್ನು 6 ಎಕರೆ ಜಮೀನಿನ ವಿಚಾರವಾಗಿ ಹಾಕಿದ್ದೆವು ಎಂದರೆ ಸರಿ. ದಾವಾ ಮನೆಯನ್ನು ನಾವು ಮೊದಲಿನ ದಾವೆಯಲ್ಲಿ ತೋರಿಸಿಲ್ಲ ಎಂದರೆ ಸರಿ. ಸಾಕ್ಷಿ ದಾವಾ ಮನೆಯನ್ನು ಇತ್ತಿಚಿಗೆ ಖರೀದಿಸಲಾಗಿದೆ ಎನ್ನುತ್ತಾರೆ. ಸದರಿ ಮನೆಯನ್ನು ನನ್ನ ಗಂಡನ ಹೆಸರಿನಲ್ಲಿ ಖರೀದಿಸಲಾಗಿದೆ ಎಂದರೆ ಸರಿ. ಮೊದಲಿನ ದಾವೆಯಲ್ಲಿ ನಾವು ರಾಜಿ ಮಾಡಿಕೊಂಡಿದ್ದೇವು ಎಂದರೆ ಸರಿ. ಅದರಂತೆ ನಮಗೆ 3 ಎಕರೆ ಮತ್ತು ನನ್ನ ಮೈದುನನಾದ 4ನೇ ಪ್ರತಿವಾದಿ ಶಿವಾನಂದರವರಿಗೆ 3 ಎಕರೆ ಬಂದಿತ್ತು ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆಗಳು ಅಸಲು ದಾವೆ 110/2015 ರ ಕುರಿತಾದ ದಾವೆಯ ಆದೇಶ ಪುಟ, ವಾದ ಪತ್ರ ಮತ್ತು ಪ್ರತಿವಾದ ಪತ್ರ, ರಾಜಿ ಡಿಕ್ರಿ ಮತ್ತು ರಾಜಿ ಪತ್ರದ ದಾಖಲೆಗಳು ಆಗಿರುತ್ತವೆ ಎಂದರೆ ಸರಿ. ಸದರಿ ದಾಖಲೆಗಳನ್ನು ಗುರುತಿಸುವ ಸಲುವಾಗಿ ನಿಡಿ-1 ರಿಂದ 5 ಎಂದು

ಗುರುತಿಸಲಾಯಿತು. ಸದರಿ ರಾಜಿ ಡಿಕ್ರಿಯಂತೆ 3 ಎಕರೆ ಜಮೀನು ನನ್ನ ಮಕ್ಕಳ ಹೆಸರಿನಲ್ಲಿ ಆಗಿತ್ತು ಎಂದರೆ ಸರಿ. ಈಗ ನನಗೆ ತೋರಿಸಿದ ಮ್ಯುಟೇಶನ ಸದರಿ ದಾಖಲೆ ಆಗಿದೆ ಎಂದರೆ ಸರಿ. ಸದರಿ ಮ್ಯುಟೇಶನ ದಾಖಲೆಯನ್ನು ಗುರುತಿಸುವ ಸಲುವಾಗಿ ನಿಡಿ-6 ಎಂದು ಗುರುತಿಸಲಾಯಿತು. ನನ್ನ ಮಕ್ಕಳ ನನ್ನ ಗಂಡನಿಗೆ ಸದರಿ ಜಮೀನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ನ್ಯಾಯಾಲಯದಲ್ಲಿ ನನ್ನ ಮಕ್ಕಳಿಗೆ ಆಸ್ತಿ ಆಗಿರುತ್ತದೆ ಮುಂದೆ ನನ್ನ ಗಂಡ ಏನು ಮಾಡಿಕೊಂಡಿರುತ್ತಾರೋ ಗೊತಿಲ್ಲ ಎನ್ನುತ್ತಾರೆ.

2. ನನ್ನ ಗಂಡ ರಾಚಯ್ಯರವರು ಶ್ರೀಶೈಲ ಎನ್ನುವವರಿಗೆ 2024 ರಲ್ಲಿ ಸದರಿ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶ್ರೀಶೈಲರವರನ್ನು ಈ ದಾವೆಯಲ್ಲಿ ನಾವು ಸೇರಿಸಿಲ್ಲ ಎಂದರೆ ಸಾಕ್ಷಿ ಮಾರಾಟ ಮಾಡಿರುವುದು ನಮಗೆ ಗೊತ್ತಿಲ್ಲ ಎನ್ನುತ್ತಾರೆ.

3. ನನ್ನ ಗಂಡ 2024 ರಲ್ಲಿ ದಾವಾ ಮನೆಯ ಕುರಿತು 2ನೇ ಪ್ರತಿವಾದಿ ಚಿದಾನಂದರವರಿಗೆ ಖರೀದಿ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಮನೆ ನನ್ನ ಗಂಡನ ಸ್ವಂತ ಆಸ್ತಿ ಆಗಿರುವುದರಿಂದ ಅದನ್ನು 2ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ಶರಣಪ್ಪರವರಿಂದ ಸದರಿ ಮನೆಯನ್ನು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.